ಕಥೆ

# ಶಮೀ ಶಮಯತೇ ಪಾಪಂ




## ಎಸ್. ನಾಗಶ್ರೀ ಅಜಯ್

ಕಲೆ: ರೂಪಶ್ರೀ ಕಲ್ಲಿಗನೂರು


'ಇನ್ನೇನಾದರೂ ಆ ಸೆಂದಿಲ್ ಕಯ್ಯಪಿಯ್ಯ ಅಂದ್ರೆ ಆಗಿದ್ದಾಗಲಿ ಅಂತ ಕತ್ತು ಕುಯ್ದು ಕೈಗೆ ಕೊಟ್ಟೇ ಹೋಗ್ತೀನಿ ನೋಡ್ತಿರು' ಎಂದು ಪ್ರಮಥನಾಥ ತನ್ನ ಕೈಯಲ್ಲಿನ ಸಿಗರೇಟು ತುಂಡಾಗಿ ಕೆಳಗೆ ಬೀಳುವುದನ್ನೇ ನೋಡುತ್ತಾ ಬಾಯಿ ತುಂಬಿದ್ದ ಹೊಗೆಯೊಟ್ಟಿಗೆ ಬುಸುಗುಡುತ್ತಾ ಹೇಳಿದಾಗ ಶಮಿ ನಕ್ಕುಬಿಟ್ಟಿದ್ದಳು. ದಿನಕ್ಕೊಂದು ಕ್ರೈಂ ಸ್ಟೋರಿ ಹೊಸೆದು ಸೆಂದಿಲ್‌ಗೆ ತಲುಪಿಸಬೇಕೆನ್ನುವ ಆದೇಶ ಬಂದಾಗ ಪ್ರಮಥನಾಥ, ಅಷ್ಟೇ ತಾನೆ? ಇನ್ನು ಮುಂದೆ ಕಲರ್ ಕಲರ್ ಸ್ಟೋರಿ ಡಿಸೈನ್ ಡಿಸೈನ್ ಆಗಿ ಬರೆದು ಹೇಗೆ ಬಿಸಾಕ್ತೀನಿ ನೋಡ್ತಿರು ಅಂತ ಕೊಚ್ಚಿಕೊಂಡು ಗಹಗಹಿಸಿದ್ದು ಈಗಷ್ಟೇ ನಡೆದಷ್ಟು ಸ್ಪಷ್ಟವಾಗಿ ಅವಳಿಗೆ ನೆನಪಿತ್ತು. ಅಷ್ಟಕ್ಕೂ ಈ ನಲವತ್ತೈದು ದಾಟಿದ ಹಿರಿ ಅಂಕಲ್‌ನೊಟ್ಟಿಗೆ ಪ್ರತಿದಿನ ಅರ್ಧಗಂಟೆ ಚಹಾ ವಿರಾಮಕ್ಕೆ ಬರುವುದು ಅವಳಿಗೆ ಇಷ್ಟವಾದ ಸಂಗತಿಯೇನಲ್ಲ. ಆದರೆ ಕೆಫೆಟೇರಿಯಾದಲ್ಲಿ ಸಿಗುವ ಕುದ್ದು ಕುದ್ದು ಸ್ವಾದ ಕಳೆದುಕೊಂಡ ಚಹಾಕ್ಕಿಂತ ರಸ್ತೆಬದಿ ತಳ್ಳುಗಾಡಿಯಲ್ಲಿ ರಾಜಣ್ಣ ಶುಂಠಿ ಘಾಟು ಚೂರು ಹೆಚ್ಚೇ ಹತ್ತಿಸಿ ಮಾಡುವ ತಾಜಾ ಚಹಾ ಅವಳಿಗೆ ಇಷ್ಟವಾಗುತ್ತಿತ್ತು. ಎದುರು ಬಸ್ ಸ್ಟಾಪಿನಲ್ಲಿ ನಿಂತ ಜನರನ್ನು ನೋಡುತ್ತಾ ಅವರ ಬಗೆಯೊಂದು ಕಥೆಕಟ್ಟುತ್ತಾ ಗುಟುಕು ಗುಟುಕು ಚಹಾ ಹೀರಿ ಹೊರಟರೆ ಮಿಕ್ಕ ಮೂರು ನಾಲ್ಕು ಗಂಟೆ ಹಗುರವಾಗಿ ಕಳೆಯುತ್ತಿತ್ತು. ಅಂತದ್ದೇ ಒಂದು ಸಂಜೆ ಈ ಅಂಕಲ್ ಪರಿಚಯವಾಗಿ ನಗೆ ಚೆಂದ, ಊರು ಚೆಂದ, ನಿನ್ನೊಳಗಿನ ಮುಗ್ಧತೆ ಇಷ್ಟ, ಕಣ್ಣು ಸೂಪರ್ ಸೇ ಊಪರ್ ಎಂದು ಅಟ್ಟ ಹತ್ತಿಸುತ್ತಾ ಚಹಾ ಜೊತೆಗಿನ ಬಿಸ್ಕೆಟ್ ಆಗಿದ್ದ. ಇನ್ನು ಇವಳು ದೂರ ಮಾಡಲಾರಳು ಅನ್ನಿಸಿದಾಗ 'ನಿನ್ನ ಹೊಗಳಿಕೊಂಡಿರೋದೇ ಕೆಲಸ ಅನ್ಕೋಬೇಡ, ಅದೇನು ಲೇಖನ ಬರೀತೀಯಮ್ಮ? ಪಾಪ ಅದಕ್ಕೊಂದು ಸರಿಯಾದ ಆದಿ-ಅಂತ್ಯ ಅನ್ನೋದಿಲ್ಲದೆ... ಜನರನ್ನ ದೇವರೇ ಕಾಪಾಡಬೇಕು, ಓದಲ್ಲ ಯಾರೂ ಅಂತ ಇಲ್ಲೇ ಪ್ರೂವಾಯ್ತಲ್ಲ' ಎಂದು ಹಂಗಿಸಿ ಹೊರಡುತ್ತಿದ್ದ. ಈ ಖರಾಬು ಮೂಡಲ್ಲಿರುವಾಗ ನಕ್ಕಿದ್ದು ತಪ್ಪಾಯ್ತೇನೋ ಎನಿಸುವಾಗಲೇ, 'ಐ ಲವ್ ಯೂ' ಎಂದಿದ್ದ. ಹುಚ್ಚುಚ್ಚು ಕಥೆ ಬರೆದು ಈವಯ್ಯಂಗೆ ಹುಚ್ಚೇ ಹಿಡಿದಿರಬೇಕು ಅಂದುಕೊಳ್ಳುತ್ತಲೇ ಶಮಿ ಮತ್ತೊಂದು ಪೆಚ್ಚುನಗೆ ನಕ್ಕು ನಡೆದಿದ್ದಳು. 'ಸೊಕ್ಕು ನೋಡು' ಎಂದು ಹಲ್ಲುಕಚ್ಚಿ ಪ್ರಮಥನಾಥ ನುಡಿದಿದ್ದು ರಾಜಣ್ಣನಿಗೆ ಕೇಳಿಸಿರಬೇಕು. ತಲೆಯೆತ್ತಿ ನೋಡಿ ಮತ್ತೆ ಟೀ ಪುಡಿ, ಸಕ್ಕರೆಯ ಡಬ್ಬಗಳನ್ನು ಒರೆಸುವ ಕೆಲಸದಲ್ಲಿ ಗರ್ಕಾದ.

ಹಾಗೆ ನೋಡಿದರೆ ಅವತ್ತಿನ ಮಧ್ಯಾಹ್ನವೇ ನಾಟಕೀಯವಾಗಿತ್ತು. 'ಒಂದೇ ಪ್ಯಾಟ್ರನ್ ಕಥೆ ಬರೀತೀರಲ್ರೀ.. ಅಕ್ರಮ ಸಂಬಂಧ ಇಟ್ಕೊಳ್ಳೋದೆಲ್ಲ ಹೆಣ್ಣುಮಕ್ಕಳೇ. ಗಂಡನ ಆಸ್ತಿ ಲಪಟಾಯಿಸೋದು, ವಿಷ ಹಾಕಿ ಕೊಲ್ಲೋದು, ಪೋಲೀಸರ ಮುಂದೆ ನಾಟಕ ಮಾಡೋದು, ದುಡ್ಡಿನ ಆಸೆ, ಒಡವೆ ಆಸೆ, ಬೇರೆ